# ವೈ. ಎನ್. ಹೊಸಕೋಟೆ (ಯಲ್ಲಪ್ಪ ನಾಯಕನ ಹೊಸಕೋಟೆ) ಪಾಳೆಯಗಾರರು: ಚಾರಿತ್ರಿಕ ವಿಶ್ಲೇಷಣೆ.

**ಮುತ್ತಯ್ಯ ಬಿ.**
ಸಂಶೋಧನಾರ್ಥಿ
ಇತಿಹಾಸ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ.

**Article Link: https://aksharasurya.com/2023/08/muthaiah-b/**

**ABSTRACT:**
ವೈ.ಎನ್. ಹೊಸಕೋಟೆ ಗ್ರಾಮದ ಚಾರಿತ್ರಿಕ ಹಿನ್ನೆಲೆ ಹಾಗೂ ಈ ಗ್ರಾಮದಲ್ಲಿ ಚಿಕ್ಕ ಪಾಳೆಯಪಟ್ಟನ್ನು ನಿರ್ಮಿಸಿಕೊಂಡು ಆಳ್ವಿಕೆ ಮಾಡಿದ ಪಾಳೆಯಗಾರ ಯಲ್ಲಪ್ಪನಾಯಕನು ಅಧಿಕಾರಕ್ಕೆ ಬರುವಾಗ ತನ್ನ ಜೀವನದಲ್ಲಿ ನಡೆದ ಕೆಲವು ಪ್ರಸಂಗಗಳು ಹಾಗೂ ಅಧಿಕಾರಕ್ಕೆ ಬಂದಾಗ ತನ್ನ ಪಾಳೆಯಪಟ್ಟನ್ನು ವಿಸ್ತರಿಸಿಕೊಳ್ಳಲು ಶತ್ರು ಪಾಳೆಯಗಾರನಾದ ಕುಂದುರ್ಪಿಯ ಪೆದ್ದಕೊನೇಟಿ ನಾಯಕನ ಅಧೀನದಲ್ಲಿದ್ದ ಕೆಲವು ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳಲು ಮಾಡಿದ ಪ್ರಯತ್ನಗಳು ಮತ್ತು ಇವರ ಅಧಿಕಾರದ ಅವಧಿಯಲ್ಲಿ ನಿರ್ಮಿಸಿರುವ ಕೆಲವು ಸ್ಮಾರಕಗಳ ಕುರಿತು ಪರಿಚಯಿಸಲಾಗಿದೆ. ಹಾಗೆಯೇ ಇವರ ನಂತರ ತನ್ನ ಪುತ್ರನಾದ ಬಡ ತಿಮ್ಮನಾಯಕನ ಆಳ್ವಿಕೆ ಮತ್ತು ಹೈದರಾಲಿಯು ವಶಪಡಿಸಿಕೊಂಡಿರುವ ಕುರಿತು ಸಂಕ್ಷಿಪ್ತವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

**KEYWORDS:** ಅಮರನಾಯಕ, ಗಿರಿದುರ್ಗ, ಕಂಪಳ, ಸಂಸ್ಥಾನ, ಪಾರುಪತ್ತೇದಾರ, ದಳವಾಯಿ, ಪಾಳೆಯಪಟ್ಟು, ಕಣಜ, ರಾಜಮಹಲ್, ಸುಭಿಕ್ಷೆ, ಪ್ರಾವಿಣ್ಯತೆ, ಆಪ್ತ.

## ಪ್ರಸ್ತಾವನೆ:

ದಕ್ಷಿಣ ಭಾರತದ ಮಧ್ಯಕಾಲೀನ ಇತಿಹಾಸದಲ್ಲಿ ಕ್ರಿ.ಶ. 1336ರಲ್ಲಿ ವಿಜಯನಗರ ಸಾಮ್ರಾಜ್ಯದ ಉದಯವು ಒಂದು ಪ್ರಮುಖ ಕಾಲಘಟ್ಟವಾಗಿದೆ. ವಿಜಯನಗರ ಕಾಲದಲ್ಲಿ ಅಮರನಾಯಕ ವ್ಯವಸ್ಥೆಯು ವಿಜಯನಗರ ರಾಜಕೀಯದಲ್ಲಿ ಒಂದು ಹೊಸ ವ್ಯವಸ್ಥೆ ಉಗಮಕ್ಕೆ ಕಾರಣವಾಯಿತು. ದಕ್ಷಿಣ ಭಾರತದಲ್ಲಿಯೇ ಬೃಹತ್ ಸಾಮ್ರಾಜ್ಯವಾದ ವಿಜಯನಗರವನ್ನು ಏಕಚಕ್ರಾಧಿಪತ್ಯದ ಮೂಲಕ

ನಿಯಂತ್ರಿಸುವುದು ಕಷ್ಟ ಸಾಧ್ಯವಾಗಿತ್ತು. ಮತ್ತು ವಿಜಯನಗರವು ಸುತ್ತ-ಮುತ್ತಲಿನ ರಾಜ್ಯಗಳೊಂದಿಗೆ ಯುದ್ಧದಲ್ಲಿ ತೊಡಗುತ್ತಿದ್ದ ಮಿಲಿಟರಿ ಆಡಳಿತವಾಗಿತ್ತು. ಹಾಗಾಗಿ ಸೈನ್ಯದ ಅಗತ್ಯತೆ ಹೆಚ್ಚಾಗಿದ್ದು, ದಕ್ಷಿಣ ಭಾರತದಾದ್ಯಂತ ವಿವಿಧ ಪ್ರದೇಶಗಳಿಗೆ ಅಮರನಾಯಕರನ್ನು ನೇಮಕ ಮಾಡಿದರು. ಜೊತೆಗೆ ಆಡಳಿತದ ನಿರ್ವಹಣೆಗೆ ಆ ಪ್ರದೇಶವನ್ನು ದಾನವಾಗಿ ನೀಡಲಾಯಿತು. ಹೀಗೆ ವಿಜಯನಗರವು ಕ್ರಿ.ಶ. 1565ರಲ್ಲಿ ರಕ್ಕಸ ತಂಗಡಿ ಕದನದಲ್ಲಿ ಸೋಲನ್ನು ಅನುಭವಿಸಿ ದುರ್ಬಲಗೊಂಡಾಗ ದಕ್ಷಿಣ ಭಾರತದಾದ್ಯಂತ ಕಾರ್ಯನಿರ್ವಹಿಸುತ್ತಿದ್ದ ಅಮರನಾಯಕರು ಸ್ವಾತಂತ್ರ್ಯ ಪಾಳೆಯಪಟ್ಟುಗಳನ್ನು ನಿರ್ಮಿಸಿಕೊಂಡು ತಮ್ಮ ತಮ್ಮ ಪ್ರದೇಶಗಳಲ್ಲಿ ಆಡಳಿತ ನಡೆಸಿದರು. ಹೀಗೆ ಆಡಳಿತ ನಿರ್ವಹಿಸುತ್ತಿದ್ದ ಪಾಳೆಯಪಟ್ಟುಗಳಲ್ಲಿ ವೈ.ಎನ್. ಹೊಸಕೋಟೆ ಪಾಳೆಯಪಟ್ಟು ಒಂದಾಗಿತ್ತು.

**ವೈ. ಎನ್. ಹೊಸಕೋಟೆಯ ಹಿನ್ನೆಲೆ:**

ವೈ.ಎನ್. ಹೊಸಕೋಟೆ ಗಿರಿದುರ್ಗವಾಗಿದ್ದು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಈಶಾನ್ಯ ಭಾಗದ ಹೋಬಳಿ ಕೇಂದ್ರ ಸ್ಥಳವಾಗಿದೆ. ಇದು ಕರ್ನಾಟಕ ಮತ್ತು ಆಂಧ್ರಪ್ರದೇಶ ಗಡಿಭಾಗವಾಗಿದ್ದು ಇಲ್ಲಿನ ಜನರು ಕನ್ನಡ ಮತ್ತು ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ಕೋಟೆಯನ್ನು ಹೊಂದಿರುವ ಬೆಟ್ಟವು ಸಮುದ್ರ ಮಟ್ಟದಿಂದ ಸುಮಾರು 2670 ಅಡಿ ಎತ್ತರದಲ್ಲಿದೆ. ಯಲ್ಲಪ್ಪನಾಯಕನ ಹೊಸಕೋಟೆಯನ್ನು ಕುಂದಿರ್ಪಿಯಿಂದ ಬಂದ ಯಲ್ಲಪ್ಪನಾಯಕನು ನಿರ್ಮಿಸಿದನೆಂದು ತಿಳಿದುಬಂದಿದೆ. ಈ ಗ್ರಾಮವನ್ನು ಸ್ಥಾಪಿಸಿ, ಕೋಟೆ ಕೊತ್ತಲಗಳನ್ನು ನಿರ್ಮಿಸಿ ಯಲ್ಲಪ್ಪನಾಯಕನ ಹೊಸಕೋಟೆಯೆಂದು ನಾಮಕರಣ ಮಾಡಿದನೆಂದು ಸ್ಥಳೀಯರು ಹೇಳುತ್ತಾರೆ.

**ಪಾಳೆಯಗಾರರ ಆಳ್ವಿಕೆ:**

ಈ ಪಾಳೆಯಪಟ್ಟನ್ನು ಕ್ರಿ.ಶ. 1650ರಲ್ಲಿ ನಿರ್ಮಿಸಿದ ಯಲ್ಲಪ್ಪನಾಯಕನ ತಂದೆ ತಿಮ್ಮಪ್ಪನಾಯಕನು ಕುಂದುರ್ಪಿ ಕೋಟೆಯಲ್ಲಿಯೇ ಇದ್ದುಕೊಂಡು ವೈ.ಎನ್. ಹೊಸಕೋಟೆಯ ಅಧಿಕಾರವನ್ನು ನಡೆಸುತ್ತಿದ್ದರಿಂದ ಇವರನ್ನು ಕುಂದುರ್ಪಿ ನಾಯಕರೆಂದು ಕರೆಯುತ್ತಿದ್ದರು. ವಿಜಯನಗರದಿಂದ ಅಧಿಕೃತವಾಗಿ ಅನುಮತಿಯನ್ನು ಪಡೆದುಕೊಂಡು ಕಾಟೆಮಲ್ಲನಾಯಕನು ತನ್ನ ಕಂಪಳದ ಸಮೇತವಾಗಿ ಕುಂದುರ್ಪಿ ಗುಡ್ಡದ ಸಮೀಪದಲ್ಲಿ ನೆಲೆಸಿದನು. ಜೊತೆಗೆ ಇವರ ಸಹೋದರರು ರತ್ನಗಿರಿ, ಮಿಡಿಗೇಶಿ, ಹೊಸಕೋಟೆ, ನಿಡುಗಲ್ಲು, ಕುಂದುರ್ಪಿ ಮುಂತಾದ ಸ್ಥಳಗಳಲ್ಲಿ ನೆಲೆನಿಂತರು.[1] ತಿಮ್ಮಪ್ಪನಾಯಕನನ್ನು

ನಲ್ಲಬೊಮ್ಮನಾಯಕನೆಂದು ಕರೆಯಲಾಗಿದೆ. ಈ ವಂಶದವರು ನಿಡುಗಲ್ಲು ಸಂಸ್ಥಾನವನ್ನಾಳಿದ ಹರತಿಯ ತಿಪ್ಪರಾಜನ ವಂಶದವರೆಂದು ಅಂದರೆ ಹರತಿಯ ಮನೆತನಕ್ಕೆ ಸೇರಿದವರೆಂದು ತಿಳಿದುಬರುತ್ತದೆ.[2]

ಯಲ್ಲಪ್ಪನಾಯಕನು ಕುಂದುರ್ಪಿಯಿಂದ ಬಂದು ಹೊಸಕೋಟೆಯನ್ನು ನಿರ್ಮಿಸಿದನು. ಈತನು ಈ ಪ್ರದೇಶದಲ್ಲಿ ದೇವಿಯ ಅನುಗ್ರಹದಿಂದ ಪಾಳೆಯಪಟ್ಟು ಕಟ್ಟಲು ಕಲ್ಪಿಸಿದನು. ಆದರೆ ಅಲ್ಲಿದ್ದ ಗಿರಿಯ ಮೇಲೆ ಪೆನುಗೊಂಡ ಪಾರುಪತ್ತೇದಾರ ಇರುವ ವಿಚಾರ ತಿಳಿದವನಾಗಿ ತನ್ನೊಂದಿಗಿದ್ದ ಮಿತ್ರ ದಳವಾಯಿಗಳಲ್ಲಿ ಚರ್ಚಿಸಿ ಪ್ರಾರಂಭಿಕವಾಗಿ ಇಂದಿನ ವೈ.ಎನ್. ಹೊಸಕೋಟೆಯಿಂದ ಪಶ್ಚಿಮಕ್ಕೆ ಸುಮಾರು 5 ಕಿ.ಮಿ ದೂರದಲ್ಲಿ ಮಾರಿಕಾಂಭೆಯ ಆಶೀರ್ವಾದದೊಂದಿಗೆ ಒಂದು ಚಿಕ್ಕ ಪಾಳೆಯಪಟ್ಟು ಕಟ್ಟಿಕೊಂಡು ಹೊಸದಾಗಿ ಕೋಟೆಯನ್ನು ನಿರ್ಮಿಸಿ ಆಡಳಿತ ಪ್ರಾರಂಭಿಸಿದನು. ಆದ್ದರಿಂದ ಇದನ್ನು ಹೊಸಕೋಟೆ ಎಂದು ಕರೆಯುವರು. ವಿಜಯನಗರದ ಅನೇಕ ಸಾಮಂತರುಗಳಲ್ಲಿ ಒಬ್ಬನಾದ ಬೊಬ್ಬುಲಿ ತಿಮ್ಮಣ್ಣನಾಯಕನು ಇಂದಿನ ಪಾವಗಡ ತಾಲ್ಲೂಕಿನ ಗಡಿಭಾಗದಲ್ಲಿರುವ ಆಂಧ್ರಪ್ರದೇಶದ ಕುಂದುರ್ಪಿಯಲ್ಲಿ ಕೋಟೆಯನ್ನು ಕಟ್ಟಿಕೊಂಡು ರಾಜ್ಯಭಾರ ಮಾಡುತ್ತಿದ್ದನು. ಇತನು ವಿಜಯನಗರದ ಅರಸರಿಗೆ ಬಹಳ ನಿಷ್ಠಾವಂತನಾಗಿದ್ದು ಅವರಿಂದ ಅಪಾರವಾದ ಗೌರವ ಮನ್ನಣೆಗಳಿಸಿದ್ದನು. ಇತನು ಕುಂದುರ್ಪಿಯಲ್ಲಿ ಆಳ್ವಿಕೆ ಮಾಡುತ್ತಿರುವಾಗ ಸುತ್ತಮುತ್ತಲಿನ ಶತ್ರು ಪಾಳೆಯಗಾರರು ಪೆನುಗೊಂಡ ನವಾಬನ ಸೈನ್ಯದ ಸಹಾಯ ಪಡೆದುಕೊಂಡು ಕುಂದುರ್ಪಿಯ ಮೇಲೆ ದಾಳಿಮಾಡಿದಾಗ ತಿಮ್ಮಣ್ಣನಾಯಕನು ಹೋರಾಟಮಾಡುತ್ತಲೇ ಯುದ್ಧರಂಗದಲ್ಲಿ ಸಾವನ್ನಪ್ಪಿದನು.[3]

ತಿಮ್ಮಪ್ಪನಾಯಕನ ಮರಣದ ಸುದ್ದಿಯನ್ನು ತಿಳಿದು ಆತನ ಪಟ್ಟದರಾಣಿ ತನ್ನ ಮಗ ಐದು ವರ್ಷದ ಬಾಲಕ ಯಲ್ಲಪ್ಪನಾಯಕನನ್ನು ಶತ್ರುಗಳಿಂದ ರಕ್ಷಿಸಲು ಆಪ್ತದಳವಾಯಿಯ ಜೊತೆಗೆ, ಆಕೆಯ ಸಂಬಂಧಿಕರಾದ ರಾಯದುರ್ಗಕ್ಕೆ ಕಳುಹಿಸಿ ತಾನು ಸತಿಸಹಗಮನ ಕೈಗೊಂಡಳು. ದಾಳಿಯಿಂದ ಇಡೀ ಕುಂದುರ್ಪಿ ಸಂಸ್ಥಾನವು ತತ್ತರಿಸಿತು. ತಿಮ್ಮಪ್ಪನಾಯಕನ ಆಪ್ತದಳವಾಯಿಗಳಾದ ಗಿಡ್ಡದಳವಾಯಿ ಮತ್ತು ಗಿಡ್ಡಮುದ್ದಯ್ಯನವರು ಬಾಲಕ ಯಲ್ಲಪ್ಪನಾಯಕನನ್ನು ಈ ಸಂದರ್ಭದಲ್ಲಿ ರಾಯದುರ್ಗಕ್ಕೆ ಕರೆದುಕೊಂಡು ಹೋಗುವುದು ಸೂಕ್ತವಲ್ಲವೆಂದು ಪರಿಗಣಿಸಿ ತುಮಕುಂಟೆ ಎಂಬ ಗ್ರಾಮದಲ್ಲಿ ಲಿಂಗಾಯಿತ ಗುರುಗಳಿಂದ ಅವನಿಗೆ ಲಿಂಗದೀಕ್ಷೆ ಮಾಡಿಸಿ ಅವನನ್ನು ಲಿಂಗಾಯಿತ ಹುಡುಗನೆಂದು ಎಲ್ಲರಿಗೂ ನಂಬಿಸುತ್ತಾರೆ. ಹೀಗೆ ಹಲವಾರು ವರ್ಷಗಳ ನಂತರ ಶತ್ರು ಪಾಳೆಯಗಾರರು ಇವನ ವಿಚಾರ

ಮರೆಮಾಚುವಂತೆಮಾಡಿ ಕೆಲವು ದಿನಗಳ ನಂತರ ಯಲ್ಲಪ್ಪನಾಯಕನನ್ನು ರಾಯದುರ್ಗಕ್ಕೆ ಕರೆತಂದು ಇವನ ಸಂಪೂರ್ಣ ಜವಾಬ್ದಾರಿಯನ್ನು ಅವನ ಸೋದರತ್ತೆಗೆ ವಹಿಸುತ್ತಾರೆ.[4] ಯಲ್ಲಪ್ಪನಾಯಕನು ರಾಯದುರ್ಗದಲ್ಲಿ ಬೆಳೆಯುತ್ತಾ ಗರಡಿ, ಕುದುರೆ, ಕತ್ತಿವರಸೆಯಲ್ಲಿ ಪ್ರಾವಿಣ್ಯತೆಯನ್ನು ಪಡೆದು ಪ್ರವರ್ಧಮಾನವಾಗಿ ಬೆಳೆಯತೊಡಗಿದನು. ತನ್ನ ಸೋದರ ಮಾವನ ಜೋತೆಸೇರಿ ರಾಯದುರ್ಗದ ಶತೃಗಳಿಗೆ ಸಿಂಹಸ್ವಪ್ನನಾದನು. ಇವನ ಶೌರ್ಯ ಪ್ರವರ್ಧಮಾನವನ್ನು ಸಹಿಸದ ರಾಯದುರ್ಗದ ದಳವಾಯಿಗಳು ದ್ವೇಷಿಸತೊಡಗಿದರು. ಯಲ್ಲಪ್ಪನಾಯಕನು ಹೀಗೆ ಬೆಳೆಯುತ್ತಾ ಸಾಗಿದರೆ ಮುಂದೆ ನನಗೂ ಹಾಗೂ ನನ್ನ ಮಕ್ಕಳಿಗೂ ಉಳಿಗಾಲ ಇರುವುದಿಲ್ಲ ಆದ್ದರಿಂದ ಹೇಗಾದರೂ ಮಾಡಿ ತನ್ನ ಸೋದರಳಿಯನಾದ ಯಲ್ಲಪ್ಪನಾಯಕನನ್ನು ಕೊಲೆಮಾಡಲು ಪ್ರಯತ್ನಿಸಿದನು.[5] ಅದಕ್ಕಾಗಿ ಒಂದು ಕುದುರೆ ಓಟದ ಸ್ಪರ್ಧೆಯನ್ನು ಏರ್ಪಡಿಸಿದರು. ಯಲ್ಲಪ್ಪನಾಯಕನು ಓಡಿಸುವ ಕುದುರೆಗೆ ವಿಷಪ್ರಾಸನ ಕುಡಿಸಿ ಮತ್ತೇರಿದ ಕುದುರೆಯು ಕೆಳಗೆ ಬಿದ್ದಾಗ ಯಲ್ಲಪ್ಪನಾಯಕನನ್ನು ಕುದುರೆಗಳಿಂದ ತುಳಿಸಿ ಕೊಲೆಮಾಡಬೇಕೆಂಬ ತಂತ್ರವನ್ನು ರೂಪಿಸಲಾಯಿತು. ಈ ತಂತ್ರವನ್ನು ತಿಳಿದ ಯಲಪ್ಪನಾಯಕನ ಸೋದರತ್ತೆ ಈ ತಂತ್ರದಿಂದ ತಪ್ಪಿಸಿಕೊಳ್ಳಲು ಪ್ರತಿತಂತ್ರವನ್ನು ರೂಪಿಸಿದಳು.

ಕುದುರೆ ಓಟ ಪ್ರಾರಂಭವಾಗುತ್ತಿದ್ದಂತೆ ಕೋಟೆಯ ಉತ್ತರ ಬಾಗಿಲಿನಿಂದ ತಪ್ಪಿಸಿಕೊಂಡು ಹೋಗಲು ಎಲ್ಲಾ ಪೂರ್ವಸಿದ್ಧತೆಯನ್ನು ಮಾಡಿದ್ದಳು. ಅಂದು ಕೋಟೆಯಲ್ಲಿ ಕುದುರೆ ಸ್ಪರ್ಧೆ ಪ್ರಾರಂಭವಾಯಿತು. ವಿಷಉಣಿಸಿದ್ದ ಕುದುರೆಯನ್ನು ಏರಿದ ಯಲ್ಲಪ್ಪನಾಯಕ ಉತ್ತರಬಾಗಿಲಿನಿಂದ ಹೊರಬಂದು ರಾಯದುರ್ಗದಿಂದ ತಪ್ಪಿಸಿಕೊಂಡು ಜೀವ ಉಳಿಸಿಕೊಳ್ಳಲು ದಿಕ್ಕು ತೋಚದೆ ಓಡಿ ಬರುವಾಗ ವಿಷಕುಡಿದಿದ್ದರಿಂದ ಕುದುರೆಯು ಚಳ್ಳಕೆರೆ ತಾಲ್ಲೂಕಿನ ಗೌರಸಮುದ್ರ ಬಳಿ ಬಂದು ಸಾವನ್ನಪ್ಪಿತು. ಆ ರಾತ್ರಿಯ ಸಮಯದಲ್ಲಿ ಎಲ್ಲಿಗೂ ಹೋಗಲು ತಿಳಿಯದೇ ಸಮೀಪದಲ್ಲಿದ್ದ ಮಾರಿಕಾಂಭ ದೇವಾಲಯಕ್ಕೆ ತೆರಳಿ ವಿಶ್ರಾಂತಿ ಪಡೆಯಲು ನಿರ್ಧ–ರಿಸಿದನು. ಆಗ ಯಲ್ಲಪ್ಪನಾಯಕನ ಸ್ವಪ್ನದಲ್ಲಿ ಪ್ರತ್ಯಕ್ಷವಾದ ಮಾರಿಕಾಂಭದೇವಿ "ಬೆಳಗ್ಗೆ ರಾಯದುರ್ಗದ ಕಡೆಯಿಂದ ನಿನ್ನ ಇಬ್ಬರು ಆಪ್ತಮಿತ್ರರು ಬಂದು ನಿನ್ನನ್ನು ಸೇರುವರು, ಅವರೊಂದಿಗೆ ನೀನು ಇಲ್ಲಿಂದ ಪೂರ್ವಭಿಮುವಾಗಿ ಪ್ರಯಾಣ ಬೆಳೆಸು ನಾನು ನಿನ್ನ ಹಿಂದೆಯೇ ಹಿಂಬಾಲಿಸಿ ಬರುತ್ತೇನೆ. ಎಲ್ಲಿ ನೀನು ಹಿಂತಿರುಗಿ ನನ್ನನ್ನು ನೋಡುತ್ತಿಯೋ ಅಲ್ಲಿಯೇ ನಾನು ನೆಲೆ ನಿಲ್ಲುತ್ತೇನೆ. ಆಗ ನೀನು ಹಿಂತಿ–ರುಗಿ ನೋಡಿದ ಸ್ಥಳದಲ್ಲಿಯೇ ನೆಲೆಸಿ ಕೋಟೆ ಕೊತ್ತಲಗಳನ್ನು ಕಟ್ಟಿಸಿ ಸುಭಿಕ್ಷೆಯಿಂದ

ರಾಜ್ಯಭಾರಮಾಡು, ನಿನ್ನ ರಕ್ಷಣೆಗಾಗಿ ಸದಾ ನಿನ್ನೊಂದಿಗೆ ಇರುತ್ತೇನೆ" ಎಂದು ಸಂದೇಶವನ್ನು ನೀಡಿದಳು.[6]

ತಕ್ಷಣ ಎಚ್ಚರಗೊಂಡ ಯಲ್ಲಪ್ಪನಾಯಕನು ದೇವಾಲಯದಿಂದ ಹೊರಬಂದು ಕುಳಿತನು. ಅದೇ ಸಮಯಕ್ಕೆ ಸ್ವಪ್ನದಲ್ಲಿ ದೇವಿ ಹೇಳಿರುವಂತೆ ರಾಯದುರ್ಗದ ತನ್ನ ಇಬ್ಬರು ಆಪ್ತಮಿತ್ರರು ಯಲ್ಲಪ್ಪನಾಯಕನನ್ನು ಬಂದು ಸೇರಿದರು. ದೇವಿಯ ವಿಚಾರವನ್ನು ತನ್ನ ಸ್ನೇಹಿತರೊಂದಿಗೆ ಹಂಚಿಕೊಂಡು ದೇವಿಯ ಆದೇಶದಂತೆ ಪೂರ್ವಾಭಿಮುಖವಾಗಿ ಪ್ರಯಾಣ ಮಾಡಿದರು. ಇಂದಿನ ಪಾವಗಡ ತಾಲ್ಲೂಕಿನ ಗಡಿಭಾಗದ ಯಲ್ಲಪ್ಪನಾಯಕನ ಹೊಸಕೋಟೆಯ ಪಶ್ಚಿಮಕ್ಕೆ ಒಂದು ಕಿ.ಮೀ ದೂರದಲ್ಲಿರುವ ಬಂಡೆಯನ್ನೇರಿ ಸಾಗುತ್ತಿರುವಾಗ ಆಕಸ್ಮಿಕವಾಗಿ ಯಲ್ಲಪ್ಪನಾಯಕನು ಹಿಂತಿರುಗಿ ನೋಡಿದನು. ದೇವಿಯ ಅನುಗ್ರಹದಂತೆ ಆ ಜಾಗದಲ್ಲೇ ಪಾಳೆಯಪಟ್ಟನ್ನು ನಿರ್ಮಿಸಲು ಕಲ್ಪಿಸಿದನು. ಆದರೆ ಅಲ್ಲಿ ಪೆನುಗೊಂಡ ಪಾರುಪತ್ತೇದಾರ ಇರುವ ವಿಚಾರ ತಿಳಿದು ಇಂದಿನ ವೈ.ಎನ್. ಹೊಸಕೋಟೆಯಿಂದ ಪಶ್ಚಿಮಕ್ಕೆ ಸುಮಾರು 5 ಕಿ.ಮೀ ದೂರದಲ್ಲಿ ಒಂದು ಚಿಕ್ಕ ಪಾಳೆಯಪಟ್ಟು ಕಟ್ಟಿಕೊಂಡು ವಾಸಿಸಲು ಪ್ರಾರಂಭಿಸಿದನು. ಈ ಪ್ರದೇಶವೇ ಮುಂದೆ ಯಲ್ಲಪ್ಪನಾಯಕನಹಳ್ಳಿ ಆಯಿತು.

ಯಲ್ಲಪ್ಪನಾಯಕನು ನಿಡುಗಲ್ಲಿನ ವೀರ ಹೊಟ್ಟಣ್ಣನಾಯಕನ ಸಮಕಾಲೀನನಾಗಿದ್ದನು.[7] ಕಿ.ಶ. 1654ರ ವೇಳೆಗೆ ಯಲ್ಲಪ್ಪನಾಯಕನು ಯುಕ್ತ ವಯಸ್ಸಿಗೆ ಬಂದನು. ಈ ವೇಳೆಗೆ ಅನೇಕ ರಾಜಕೀಯ ಬದಲಾವಣೆಗಳಾದವು. ಕುಂದುರ್ಪಿಯ ಪೆದ್ದಕೊನೇಟಿನಾಯಕನು ಅಸಂತೃಪ್ತ ರಾಜ್ಯಭಾರ ಮಾಡುತ್ತಿದ್ದನು. ಚಿತ್ರದುರ್ಗದ ಇಮ್ಮಡಿ ಮದಕರಿನಾಯಕನು ಪೆನುಗೊಂಡೆಯ ಹುಸೇನ್‌ಖಾನನಿಗೂ ಮತ್ತು ಪೆದ್ದಕೊನೇಟಿನಾಯಕನಿಗೂ ಪರಸ್ಪರ ಸ್ನೇಹಿತರಾಗಿದ್ದರು. ಪೆನುಗೊಂಡೆಯ ಅಹಮದ್ ಆದಿಲ್‌ಷಾ ಮತ್ತು ಪೆದ್ದಕೊನೇಟಿನಾಯಕನ ಮಧ್ಯೆ ಹೊಸದಾಗಿ ಕೋಟೆಗಳನ್ನು ನಿರ್ಮಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಪ್ರಾಂತ್ಯದಲ್ಲಿ ಯಾವ ಬದಲಾವಣೆಯಾಗಬೇಕಿದ್ದರೂ ಪೆನುಗೊಂಡೆಯ ಸುಲ್ತಾನರ ಅನುಮತಿ ಪಡೆಯಬೇಕಿತ್ತು.[8] ಇಂತಹ ಅವಕಾಶಕ್ಕಾಗಿಯೇ ಕಾಯುತ್ತಿದ್ದ ಯಲ್ಲಪ್ಪನಾಯಕನು ತನ್ನ ಪೂರ್ವಿಕರು ಕುಂದುರ್ಪಿಯ ರಾಜರಾಗಿದ್ದು ಹಿಂದೆ ತನ್ನ ತಂದೆಯಾದ ತಿಮ್ಮಪ್ಪನಾಯನನ್ನು ಮೋಸದಿಂದ ಕೊಂದ ವಿಷಯವನ್ನು ತಾನು 16 ವರ್ಷಗಳಿಂದ ರಾಜ್ಯ ಭ್ರಷ್ಟರಾಗಿರುವ ವಿಷಯವನ್ನು ಹುಸೇನ್‌ಖಾನ್‌ನಿಗೆ ತಿಳಿಸಿ ನಾನೇ ಕುಂದುರ್ಪಿ ಸೀಮೆಯ ನಿಜವಾದ ವಾರಸುದಾರನಾಗಿದ್ದು ನನಗೆ ಪುನಃ ತನ್ನ ಸಂಸ್ಥಾನವನ್ನು

ಹಿಂತಿರುಗಿಸಬೇಕೆಂದು ತಿಳಿಸಿ ಹೊಸಕೋಟೆ, ಇಂದ್ರಬೆಟ್ಟ, ಕಾಮನದುರ್ಗ, ನಾಗಲಾಪುರ, ಕಂಬದೂರು, ಪೇರೂರು, ತಿರುಮಣಿ ಮೊದಲಾದ ಪ್ರಾಂತ್ಯಗಳನ್ನು ಪಡೆದನು.[9] ಯಲ್ಲಪ್ಪನಾಯಕನು ಪೆನುಗೊಂಡೆಯ ನವಾಬರಿಂದ ಕೆಲವು ಪ್ರಾಂತ್ಯಗಳನ್ನು ಪಡೆದಿದ್ದರಿಂದ ಪೆದ್ದಕೊನೇಟಿನಾಯಕನು ಕುಂದುರ್ಪಿಯಲ್ಲಿ ಯಾವ ಹಿರಿತನವನ್ನೂ ಸಾಧಿಸಲು ಸಾಧ್ಯವಾಗಲಿಲ್ಲ. ಸದಾಕಾಲ ಸೇನಾ ಸಿಬ್ಬಂದಿಯನ್ನು ಸಂಗ್ರಹಿಸುವುದೇ ಆಯಿತು. ಪೆನುಗೊಂಡ ದೊರೆಯಾಗಿದ್ದ ನಾನು ಇನ್ನೊಬ್ಬರ ಅಧೀನದಲ್ಲಿರುವಂತಾಯಿತೆಂದು ಯೋಚಿಸಿ ಒಮ್ಮೆ ರಾಜ್ಯಕಾರ್ಯವೊಂದರಲ್ಲಿ ಹುಸೇನ್‌ಖಾನನಿಗೂ ಮತ್ತು ಕೊನೇಟಿನಾಯಕನ ಮಧ್ಯೆ ವೈಮನಸ್ಸು ಬೆಳೆಯಿತು. ಈ ಸಂದರ್ಭದಲ್ಲಿ ಹುಸೇನ್‌ಖಾನನು ಕುಂದುರ್ಪಿ ಸೀಮೆಯ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡು ಇದೇ ಭಾಗವನ್ನು ಯಲ್ಲಪ್ಪನಾಯಕನಿಗೆ ನೀಡಿದನು. ಹೀಗೆ ಹಿರಿಯರು ಸಂಪಾದಿಸಿದ ತನ್ನ ಪಾಮುಲಬಂಡೆ ಎಂಬ ಬೆಟ್ಟದಲ್ಲಿ ನಾಲ್ಕು ಬಾಗಿಲುಗಳುಳ್ಳ ಬಲವಾದ ಕೋಟೆಯನ್ನು ನಿರ್ಮಿಸಿದನು. ಅನೇಕ ಮಂಟಪಗಳನ್ನು ಧಾನ್ಯದ ಕಣಜ, ಮದ್ದಿನ ಕಣಜ ಹಾಗೂ ದೇವಾಲಯಗಳನ್ನು ನಿರ್ಮಿಸಿದನು. ಹೊಸಕೋಟೆಯ ಗಡಿಭಾಗಗಳಲ್ಲೂ ಸಹ ಚಿಕ್ಕ ಚಿಕ್ಕ ಸ್ಥಳ ದುರ್ಗಗಳನ್ನು ನಿರ್ಮಿಸಿದನು.

ಕುಂದುರ್ಪಿಯ ಪೆದ್ದಕೊನೇಟಿನಾಯಕನು ಹೇಗಾದರೂ ಈ ಪ್ರದೇಶಗಳನ್ನು ಪುನಃ ಪಡೆಯಬೇಕೆಂದು ಚಿತ್ರದುರ್ಗದ ಇಮ್ಮಡಿ ಮದಕರಿ ನಾಯಕನನ್ನು ಭೇಟಿಯಾಗಿ ತನಗೆ ಕಂಬದೂರು, ಪೇರೂರು ಹಾಗೂ ತಿರುಮಣಿ ಪ್ರದೇಶಗಳನ್ನು ಕೊಡಿಸಬೇಕೆಂದು ಕೇಳಿಕೊಂಡನು. ಆಗ ಮದಕರಿನಾಯಕನು ನೀಯೋಗಿ ಸರ್ಜೆರಾಯ ತಿಮ್ಮಣ್ಣ ಮತ್ತು ಕಾಟಣ್ಣನಾಯಕ ಇವರ ಸಂಗಡ ಕೊನೇಟಿನಾಯಕರ ರಾಯಸದ ಓಬಣ್ಣ, ಹಟ್ಟಿಮಲ್ಲಪ್ಪನಾಯಕರ ಹಜೀಬ್‌ಲಕ್ಷ್ಮಯ್ಯ ಮೊದಲಾದವರನ್ನು ಕೊನೇಟಿನಾಯಕನ ಜೊತೆ ಕಳುಸಿದನು. ಈ ನಾಲ್ಕು ಜನರು ಹುಸೇಣ್‌ಖಾನನ ಬಳಿಬಂದು ಕಾರ್ಯಭಾಗ ತಿಳಿಸಿ ಈ ಕಾರ್ಯಕ್ಕೆ ಸಾವಿರ ಕುದುರೆ, ಸಾವಿರ ಕಾಲಾಳು ಸಹ ಕರೆದುಕೊಂಡು ಹೋಗಿ ಕಂಬದೂರಿಗೆ ಬಂದು ಯಲ್ಲಪ್ಪನಾಯಕರಿಗೆ ಬುದ್ಧಿವಾದವನ್ನು ತಿಳಿಸಿ ಕಟ್ಟಿಕೊಂಡ ರಾಜ್ಯವನ್ನೆಲ್ಲಾ ಕೊನೇಟಿನಾಯಕನಿಗೆ ಬಿಟ್ಟುಕೊಡಿಸಿದರು. ಹೀಗೆ ಯಲ್ಲಪ್ಪನಾಯಕನು ಚಿತ್ರದುರ್ಗದ ಮದಕರಿನಾಯಕನ ದೆಸೆಯಿಂದ ಬೆಲೆ ಬಾಳುವ ಹಾಗೂ ಹೆಚ್ಚಿನ ಆದಾಯ ತರುವ ಪ್ರದೇಶಗಳನ್ನು ಕಳೆದುಕೊಳ್ಳಲಾಯಿತು.[10]

ಯಲ್ಲಪ್ಪನಾಯಕನ ನಂತರ ಅವನ ಮಗ ಬಡತಿಮ್ಮನಾಯಕನು ಕ್ರಿ.ಶ.

1678ರಲ್ಲಿ ಅಧಿಕಾರಕ್ಕೆ ಬರುವನು.[11] ಇವನು ಅನೇಕ ದಾನ ಧರ್ಮಗಳನ್ನು ಮಾಡುತ್ತ ತಂದೆಯಂತೆಯೇ ಪ್ರಸಿದ್ಧನಾದನು. ಇತನನ್ನು ಶ್ರೀಮನ್‌ಮಹಾನಾಯಕಾಚಾರ್ಯ ಎಂದು ಕರೆಯಲಾಗಿದೆ. ಇವನ ನಂತರ ಹಿರಿಯ ರಾಮಪ್ಪನಾಯಕನು ಆಳ್ವಿಕೆ ಮಾಡುತ್ತಾನೆ. ಇವನ ಕಾಲದಲ್ಲಿ ಹೈದರಾಲಿಯು ಕುಂದುರ್ಪಿ, ನಿಡುಗಲ್ಲು, ಪಾವಗಡ, ಮಡಕಶಿರಾ, ರತ್ನಗಿರಿ ಕೋಟೆಗಳನ್ನು ವಶಪಡಿಸಿಕೊಳ್ಳುವಾಗ ವೈ.ಎನ್. ಹೊಸಕೋಟೆಯ ಮೇಲೆ ದಾಳಿಮಾಡಿ ವಶಪಡಿಸಿಕೊಂಡನು. ಈ ಪಾಳೆಯಗಾರರು ಕೊನೆಯವರೆಗೂ ಪೆನುಗೊಂಡ ನವಾಬರಿಗೂ ಮತ್ತು ಹೈದರಾಲಿಗೂ ಕಪ್ಪ ಕಾಣಿಕೆಯನ್ನು ಸಂದಾಯ ಮಾಡುತ್ತಾ ಸ್ವತಂತ್ರ ಪಾಳೆಯಗಾರರಂತೆಯೇ ಹೋರಾಡಿದರು.

ಇದು ಒಂದು ಚಿಕ್ಕ ಪಾಳೆಯಪಟ್ಟಾದರೂ ತನ್ನ ಘನತೆಯನ್ನು ಉಳಿಸಿಕೊಂಡು ಬಂದಿದೆ. ಇದೊಂದು ಸಾಧಾರಣವಾದ ಕೋಟೆಯಾಗಿದ್ದು ಅಷ್ಟೇನೂ ಸುಭದ್ರವಲ್ಲದ ಕೋಟೆ ಎಂದು ಹೇಳಬಹುದು. ಈ ಕೋಟೆಯಲ್ಲಿ ಪಾಳೆಯಗಾರರ ಕಾಲದಲ್ಲಿ ನಿರ್ಮಿಸಿರುವಂತ ನೀರಿನ ಹೊಂಡಗಳು, ನೀರಿನ ದೋಣೆಗಳು, ರಾಜಮಹಲ್, ತುಪ್ಪದ ಕಣಜಗಳು, ಚೆನ್ನಕೇಶವ ದೇವಾಲಯ ಮಂಟಪಗಳು ಹಾಗೂ ಪಾಳೆಯಗಾರರ ಸಮಾಧಿಗಳನ್ನು ಇಂದಿಗೂ ಸಹ ಕಾಣಬಹುದು. ಹಾಗೇಯೆ ಈ ಪಾಳೆಯಗಾರರ ಮನೆತನದವರು ವೈ.ಎನ್ ಹೊಸಕೋಟೆಯಲ್ಲಿ ವಾಸವಾಗಿರುತ್ತಾರೆ. ಈ ವಂಶಸ್ಥರ ಮನೆಯಲ್ಲಿ ಪಾಳೆಯಗಾರರ ಕಾಲದಲ್ಲಿ ಉಪಯೋಗಿಸಿರುವಂತಹ ಆಯುಧಗಳು, ಕೆಲವು ಕಾಗದ ಪತ್ರಗಳು ಇಂದಿಗೂ ನೋಡಬಹುದು. ದಸರಾ ಹಬ್ಬದ ಸಂದರ್ಭದಲ್ಲಿ ಮೈಸೂರು ದಸರಾ ನೆನಪಿಗೆ ತರುವಂತೆ ಇಲ್ಲಿಯೂ ಸಹ ಅದ್ದೂರಿಯಾಗಿ ದಸರಾ ಹಬ್ಬವನ್ನು ಆಚ–ರಿಸುತ್ತಾರೆ.

**ಕೊನೆ ಟಿಪ್ಪಣಿಗಳು:**

1. ಯೋಗೀಶ್ವರಪ್ಪ ಡಿ. ಎನ್., ಮಧ್ಯಕಾಲೀನ ಕರ್ನಾಟಕ ಪಾಳೆಯಗಾರರು (2009), ಮೀನಾಕ್ಷಿ ರಮೇಶ್ ಪ್ರಕಾಶಕರು, ಬೆಂಗಳೂರು, ಪು.ಸಂ. 79.
2. ಲಕ್ಷ್ಮಣ್ ತೆಲಗಾವಿ (ಸಂ)., ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ (1987), ಹರ್ತಿಕೋಟೆ, ಪು.ಸಂ 299.
3. ಹೊ.ಮ. ನಾಗರಾಜ., ಗಡಿನಾಡ ಯಲ್ಲಪ್ಪನಾಯಕನ ಹೊಸಕೋಟೆ (2011), ಕನ್ನಡ ಕಲಾ ಮತ್ತು ಸಾಂಸ್ಕೃತಿಕ ಮಂಡಲ, ಕನ್ನಡ ಭವನ, ಯ, ನ, ಹೊಸಕೋಟೆ, ಪು. ಸಂ 17.
4. ಮುದ್ದುವಿರಪ್ಪ., ತುಮಕೂರು ಜಿಲ್ಲೆಯ ಕೋಟೆಕೊತ್ತಲಗಳ ಸಾಂಸ್ಕೃತಿಕ ಒಳನೋಟ (2011), ತುಮಕೂರು ವಿಶ್ವವಿದ್ಯಾಲಯ, ಪು.ಸಂ. 206.
5. ಚೆಲುವರಾಜನ್ ವಿ. ಆರ್., ಪಾವಗಡ ತಾಲ್ಲೂಕು ದರ್ಶನ (2022), ಅಲಂಕಾರ್ ಪ್ರಕಾಶಕರು, ಪಾವಗಡ, ಪು.ಸಂ. 152.
6. ಹೊ. ಮ. ನಾಗರಾಜ್., ಪೂರ್ವೋಕ್ತ, ಪು.ಸಂ. 19.
7. ಬಿ.ಎಲ್. ರೈಸ್., ಎಫಿಗ್ರಾಫಿ ಕರ್ನಾಟಿಕ 12, ಪಾವಗಡ 70, ಪು.ಸಂ 387.
8. ಲಕ್ಷ್ಮಣ್ ತೆಲಗಾವಿ., (ಸಂ) ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು (1976), ದೀಪಕ್ ಬುಕ್ ಹೌಸ್, ಚಿತ್ರದುರ್ಗ, ಪು.ಸಂ 303.
9. ಚೆಲುವರಾಜನ್ ವಿ. ಆರ್., ಪೂರ್ವೋಕ್ತ, ಪು.ಸಂ 155.
10. ಲಕ್ಷ್ಮಣ್ ತೆಲಗಾವಿ., ಪೂರ್ವೋಕ್ತ, ಪು.ಸಂ 303.
11. ಬಿ.ಎಲ್. ರೈಸ್., ಎ. ಕ. 12, ಪಾವಗಡ 70, ಪು. ಸಂ. 387.